# ಸಮಕಾಲೀನ ಭಾರತೀಯ ಸಾಹಿತ್ಯದ ಇತ್ತೀಚಿನ ಪ್ರವೃತ್ತಿಗಳು: ಹೊಸ ತಲೆಮಾರಿನ ತಲ್ಲಣಗಳು

**ಕಸ್ತೂರಿ ದಳವಾಯಿ***

**DOI: https://doi.org/10.5281/zenodo.21438340**

**ABSTRACT**

ಜಾಗತೀಕರಣ, ತಂತ್ರಜ್ಞಾನದ ಅತಿಯಾದ ವೇಗ ಮತ್ತು ಆರ್ಥಿಕ ಒತ್ತಡಗಳು ಇಂದಿನ ಹೊಸ ತಲೆಮಾರಿನ ಯುವ ಸಾಹಿತಿಗಳಲ್ಲಿ ಹುಟ್ಟುಹಾಕಿರುವ ಗುರುತಿನ ಬಿಕ್ಕಟ್ಟು ಹಾಗೂ ವಿಶಿಷ್ಟ ತಲ್ಲಣಗಳನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಕೃತಕ ಬುದ್ಧಿಮತ್ತೆ (AI) ಮತ್ತು ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಾಗಿ ಯುವ ಬರಹಗಾರರು ಬರವಣಿಗೆಯ ವಸ್ತುವಿನ ಆಯ್ಕೆಯಲ್ಲಿ ತೀವ್ರ ಗೊಂದಲ ಹಾಗೂ ಹಿಂಜರಿಕೆ ಎದುರಿಸುತ್ತಿದ್ದಾರೆ. ನವೋದಯ, ನವ್ಯ, ದಲಿತ ಹಾಗೂ ಬಂಡಾಯ ಸಾಹಿತ್ಯದ ವಿವಿಧ ಘಟ್ಟಗಳನ್ನು ದಾಟಿಬಂದಿರುವ ಕನ್ನಡ ಸಾಹಿತ್ಯವು, ಇಂದು ಕಾರ್ಪೊರೇಟ್ ಸಂಸ್ಕೃತಿ, ಭ್ರಷ್ಟಾಚಾರ ಹಾಗೂ ಕೋಮುವಾದದಂತಹ ವರ್ತಮಾನದ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ. ಮಾರುಕಟ್ಟೆ ಮನೋಧರ್ಮವನ್ನು ಧಿಕ್ಕರಿಸಿ, ಪ್ರಜಾಪ್ರಭುತ್ವದ ಮೌಲ್ಯಗಳು, ಸಮಾನತೆ ಮತ್ತು ಜೀವಪರ ಕಾಳಜಿಯನ್ನು ಎತ್ತಿಹಿಡಿಯುವ 'ಹೊಸ ಬಂಡಾಯ ಸಾಹಿತ್ಯ'ದ ತುರ್ತು ಅಗತ್ಯವನ್ನು ಬಲವಾಗಿ ಪ್ರತಿಪಾದಿಸಲಾಗಿದೆ. ಸಮಕಾಲೀನ ಸವಾಲುಗಳಿಗೆ ಸ್ಪಂದಿಸುತ್ತಾ, ಮಾನವೀಯ ಸಂವೇದನೆ ಮತ್ತು ವೈಚಾರಿಕತೆಯ ತಳಹದಿಯ ಮೇಲೆ ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ ಯುವ ಬರಹಗಾರರ ಜವಾಬ್ದಾರಿಯನ್ನು ಮಾರ್ಮಿಕವಾಗಿ ಕಟ್ಟಿಕೊಡಲಾಗಿದೆ.

**KEYWORDS:** ಸಮಕಾಲೀನ ಸಾಹಿತ್ಯ, ಯುವ ಬರಹಗಾರರ ತಲ್ಲಣಗಳು, ಜಾಗತೀಕರಣ ಮತ್ತು ತಂತ್ರಜ್ಞಾನ, ಗುರುತಿನ ಬಿಕ್ಕಟ್ಟು, ಹೊಸ ಬಂಡಾಯ ಸಾಹಿತ್ಯ.

* **ಡಾ. ಕಸ್ತೂರಿ ದಳವಾಯಿ,** ಕನ್ನಡ ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ.

ಪ್ರಮುಖವಾಗಿ ಜಾಗತೀಕರಣದ ವೇಗದ ತಂತ್ರಜ್ಞಾನ, ಸಾಂಸ್ಕೃತಿಕ ಬದಲಾವಣೆ ಮತ್ತು ಆರ್ಥಿಕ ಒತ್ತಡಗಳಿಂದ ಹುಟ್ಟಿಕೊಂಡಿವೆ. ಇಂದಿನ ಯುವಕರು, ಬರಹಗಾರರು ಗುರುತಿನ ಬಿಕ್ಕಟ್ಟು, ತೀವ್ರವಾದ ಪೈಪೋಟಿ, ಸಾಮಾಜಿಕ ಜಾಲತಾಣಗಳ ಪ್ರಭಾವ ಮತ್ತು ಸಂದರ್ಭಗಳಲ್ಲಿನ ಅನಿಶ್ಚಿತತೆಯಂತಹ ತಲ್ಲಣಗಳನ್ನು ಎದುರಿಸುತ್ತಿದ್ದಾರೆ. ಸಾಹಿತ್ಯ ಮತ್ತು ಬದುಕಿನ ಹೊಸ ಮೌಲ್ಯಗಳನ್ನು ಹುಡುಕುವ ಅನಿವಾರ್ಯತೆ ಇದೆ.

**ಕನ್ನಡ ಸಾಹಿತ್ಯ ಮತ್ತು ಹೊಸ ತಲೆಮಾರಿನ ಪ್ರಮುಖ ತಲ್ಲಣಗಳು**

ಏನು ಬರೆಯಬೇಕು? ಯಾರಿಗೆ ಬರೆಯಬೇಕು? ಯಾವುದಕ್ಕಾಗಿ ಬರೆಯಬೇಕು? ಎಂಬ ಪ್ರಶ್ನೆಗಳೊಂದಿಗೆ ಹೊಸ ಬರಹಗಾರರು ಕಲೆ ಮತ್ತು ಸಾಹಿತ್ಯದಲ್ಲಿ ತಮ್ಮದೇ ಆದ ಹೊಸ ಭಾಷೆ ಮತ್ತು ಶೈಲಿಯನ್ನು ಹುಡುಕುತ್ತಿದ್ದಾರೆ. ಇವರನ್ನು ಮತ್ತೆ ಮತ್ತೆ ಕಾಡುವುದು ಗುರುತಿನ ಬಿಕ್ಕಟ್ಟು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾಗಿ ಬೇಕಾಗಿದೆ.

ಆರ್ಥಿಕ ಅನಿಶ್ಚಿತತೆ, ತೀವ್ರವಾದ ಪೈಪೋಟಿ, ಉದ್ಯೋಗದ ಒತ್ತಡ ಮತ್ತು ಆರ್ಥಿಕ ಸುಸ್ಥಿರತೆಯ ಕಳವಳಗಳು ಯುವಕರಲ್ಲಿ ಭವಿಷ್ಯದ ಬಗೆಗಿನ ಭೀತಿಯನ್ನು ಹೆಚ್ಚಿಸಿವೆ. ತಂತ್ರಜ್ಞಾನ ಮತ್ತು ಸಾಮಾಜಿಕ ಜಾಲತಾಣದ ಒತ್ತಡ, ವರ್ಚುವಲ್ ಜಗತ್ತಿನಲ್ಲಿ ಬದುಕುವ ಅನಿವಾರ್ಯತೆ, ಸದಾ ಸಂಪರ್ಕದಲ್ಲಿರುವ ಒತ್ತಡ, ಸಾಮಾಜಿಕ ಜಾಲತಾಣಗಳಲ್ಲಿನ ಸ್ಪರ್ಧಾತ್ಮಕ ಜೀವನಶೈಲಿ ಮಾನಸಿಕ ಒತ್ತಡವನ್ನು ಹೆಚ್ಚಿಸಿವೆ. ಇಂದಿನ ಜಾಗತಿಕ ಸಂದರ್ಭದಲ್ಲಿ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಆಧುನಿಕ ಜೀವನಶೈಲಿಯ ನಡುವಿನ ಸಂಘರ್ಷವು ಯುವಕರಲ್ಲಿ ದೊಡ್ಡ ತಲ್ಲಣವನ್ನು ಉಂಟುಮಾಡಿದೆ.

ಸಾಹಿತ್ಯಕ ಮತ್ತು ಬೌದ್ಧಿಕ ತಲ್ಲಣ: ಹೊಸ ತಲೆಮಾರಿನ ಬರಹಗಾರರು ಜಾತಿವ್ಯವಸ್ಥೆ ಮತ್ತು ಮಾರುಕಟ್ಟೆ ಮನೋಧರ್ಮದ ನಡುವಿನ ಸಂಘರ್ಷವನ್ನು ಎದುರಿಸುತ್ತಿದ್ದಾರೆ. ಈ ತಲ್ಲಣಗಳು ದಲಿತ ಚಳವಳಿ ಮತ್ತು ಹೊಸ ಬಂಡಾಯ ಸಾಹಿತ್ಯದ ರೀತಿಯಲ್ಲಿ ಚರ್ಚೆಯಾಗುತ್ತಿವೆ.

ಹೊಸ ಬರಹಗಾರರು ಬರವಣಿಗೆಯನ್ನು ರೂಪಕ್ಕಿಳಿಸಲು ಹಿಂಜರಿಯುತ್ತಾರೆ. ಇದಕ್ಕೆ ಕಾರಣಗಳು ಹಲವಾರು. ಇಂದಿನ ಯುವ ಪೀಳಿಗೆ ತಮ್ಮನ್ನು ತಾವು ವಾಟ್ಸಪ್, ಫೇಸ್‌ಬುಕ್, ಗೂಗಲ್, ಎ.ಐ (ಕೃತಕ ಬುದ್ಧಿಮತ್ತೆ ) ಗಳಿಂದ ಜ್ಞಾನವನ್ನು ಗಳಿಸುತ್ತಿರಬೇಕಾದರೆ ನಮ್ಮ ಬರಹದ ಪುಸ್ತಕಗಳನ್ನು ಯಾರು ಓದುತ್ತಾರೆ ಎಂಬ ಹಿಂಜರಿಕೆಯು ಇದೆ.

ಸಾಮಾನ್ಯವಾಗಿ ನೋಡುವುದಾದರೆ ಪ್ರತಿ ಕಾಲಘಟ್ಟದಲ್ಲೂ ಕನ್ನಡ ಸಾಹಿತ್ಯವು ಹೊಸ ವಸ್ತುವಿನೊಂದಿಗೆ ಸಾಹಿತ್ಯ ರಚನೆ ನೋಡಿರುವುದನ್ನು ಗಮನಿಸಬಹುದು. ನವೋದಯದಲ್ಲಿ ರಾಷ್ಟ್ರೀಯತೆ, ಸ್ವಾತಂತ್ರ್ಯ ಹೋರಾಟ, ಸಮಾಜ ಸುಧಾರಣೆ, ಪ್ರಕೃತಿ, ದೇವರು ಇಂತಹ ವಿಷಯಗಳು ಸಾಹಿತ್ಯ ರಚನೆಯ ವಸ್ತುವಾಗಿದ್ದವು.

ಶೋಷಣೆ, ಸಮಾನತೆ, ರೈತರ ಬದುಕು ಇವು ಪ್ರಗತಿಪರವಾದಿಗಳ ವಸ್ತುಗಳಾಗಿದ್ದವು. ಅಸ್ತಿತ್ವ, ವ್ಯಕ್ತಿಯಲ್ಲಿನ ದ್ವಂದ್ವ, ಇವು ನವ್ಯದ ಸಾಹಿತ್ಯ ರಚನೆಯ ವಸ್ತುಗಳಾಗಿದ್ದವು. ಸಮಾನತೆಗಾಗಿ ಹೋರಾಟ, ತಮ್ಮ ಹಕ್ಕುಗಳಿಗಾಗಿ ಹೋರಾಟ, ದಬ್ಬಾಳಿಕೆ ವಿರೋಧ ಇವೆಲ್ಲಾ ದಲಿತ ಮತ್ತು ಬಂಡಾಯ ಸಾಹಿತ್ಯ ರಚನಾ ವಿಷಯಗಳಾಗಿದ್ದವು. ಆದರೆ ಇಂದಿನ ಯುವ ಬರಹಗಾರರಿಗೆ ನವಯುಗದ ಬದುಕಿನ ಸಂಕೀರ್ಣತೆಯೊಂದಿಗೆ ಯಾವ ವಸ್ತುವನ್ನು ಬರವಣಿಗೆಯ ವಿಷಯವಾಗಿ ಬಳಸಬೇಕು ಎಂಬುದೇ ಬಹುದೊಡ್ಡ ಸವಾಲು.

ನಾವು ಯಾವುದನ್ನು ಮೆಚ್ಚಿ ಓದುತ್ತೇವೆಯೋ ಅಂಥದ್ದನ್ನೇ ಬರೆಯಬೇಕು, ಅಂತ ಮನಸ್ಸಿನಲ್ಲಿ ಬಯಕೆ ಶುರುವಾಗುತ್ತದೆ. ಆದ್ದರಿಂದ ಕ್ಲಾಸಿಕ್ ಅಂತ ಪರಿಗಣಿಸಲಾಗಿರುವ ಪುಸ್ತಕಗಳನ್ನು ಮಾತ್ರ ಓದಬೇಕು. ಬಿಡುವಿದ್ದರೆ ಪ್ರತಿಯೊಂದು ಯುಗದಲ್ಲಿ ಅವರ ಜೀವನದ ಗತಿಬಿಂಬ, ಪ್ರತಿಬಿಂಬ ಸಹಿತ ಭಾವನೆ ಸಾಹಿತ್ಯ ರಚನೆಗೆ ಕಾರಣವಾಗಿದೆ. ಸಾಹಿತ್ಯವು ಸಮಾಜದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಜೀವನದ ಪ್ರತಿಬಿಂಬವಾಗಿದೆ. ಇಂದಿನ ಜಾಗತೀಕರಣ, ತಂತ್ರಜ್ಞಾನ, ಹೊಸ ಮೌಲ್ಯಗಳು, ಸಾಮಾಜಿಕ ಬದಲಾವಣೆ ಹಾಗೂ ಬದುಕಿನ ಒತ್ತಡಗಳು ಹೊಸ ತಲೆಮಾರಿನ ಬರಹಗಾರರಿಗೆ ಹಲವು ತಲ್ಲಣಗಳನ್ನು ಉಂಟುಮಾಡಿವೆ.

ಬರಹವು ಬರಹಗಾರನ ಆಲೋಚನೆ, ಭಾವನೆ, ಅನುಭಾವ, ಜ್ಞಾನ ಮತ್ತು ಕಲ್ಪನೆಗಳನ್ನು ಅಕ್ಷರಗಳ ಮೂಲಕ ದಾಖಲಿಸುವ ಪ್ರಕ್ರಿಯೆಯಾಗಿದೆ.

ತಲ್ಲಣಗಳ ನಿವಾರಣೆಗೆ ಬಂಡಾಯ ಸಾಹಿತ್ಯ ಅಗತ್ಯ. ವರ್ತಮಾನದ ಬಿಕ್ಕಟ್ಟುಗಳಾದ ಭ್ರಷ್ಟಾಚಾರ, ಕೋಮುಗಲಭೆ, ಜನರಲ್ಲಿ ಮಾರುಕಟ್ಟೆ ಮನೋಭಾವ ಮೂಡಿಸುವ ಈ ಕಾರ್ಪೊರೇಟ್ ಜಗತ್ತಿನ ತಲ್ಲಣಗಳನ್ನು ಬೇರು ಸಹಿತ ಕಿತ್ತೊಗೆಯಲು ಇಂದು ಬಂಡಾಯ ಸಾಹಿತ್ಯದ ಅನಿವಾರ್ಯತೆ ಇದೆ.

ಪ್ರತಿ ವಿಷಯದಲ್ಲಿ ಜಾತಿ ಲೆಕ್ಕಾಚಾರ, ಮಾರುಕಟ್ಟೆ ಮನೋಧರ್ಮದಿಂದಾಗಿ ಇಂದು ಸಮಾಜದಲ್ಲಿ ಹಲವು ಬಗೆಯ ತಲ್ಲಣಗಳು ತಾಂಡವವಾಡುತ್ತಿವೆ. ಇವುಗಳಿಗೆ ಇಂದಿನ ಸಾಹಿತ್ಯ, ಸಾಹಿತಿಗಳು ಇಂಬು ನೀಡುತ್ತಿದ್ದಾರೆಯೇ? ಎಂಬ ಪ್ರಶ್ನೆಗಳು ಜನರನ್ನು ಕಾಡುತ್ತಿವೆ.

ಅದಕ್ಕಾಗಿ ಕೆಟ್ಟು ಹೋಗಿರುವ ಕಾರ್ಪೊರೇಟ್ ಸಮಾಜದ ವಿರುದ್ಧ ಬಂಡಾಯ ಸಾಹಿತ್ಯದ ಹುಟ್ಟು ಇಂದಿನ ಅಗತ್ಯತೆ ಎಂದರು. ಹೋರಾಟ ಮರೆತ ಸಾಹಿತ್ಯ ಎನ್ನುವುದು ಇಂದು ಕೇವಲ ರಾಜಕಾರಣಿಗಳಲ್ಲಿ ಸಾಹಿತ್ಯವನ್ನು ಆಳುವ ಪ್ರವೃತ್ತಿಯಾಗಿ ಕಂಡುಬರುತ್ತದೆ. ಇದರಿಂದ ಸಾಹಿತ್ಯ ಯಾವುದರ ವಿರುದ್ಧ ಹೋರಾಡಬೇಕಾಗಿತ್ತೋ ಅದರ ವಿರುದ್ಧ ಹೋರಾಡದೇ ಸ್ವಾರ್ಥ, ವೈಯಕ್ತಿಕ ಹಿತಾಸಕ್ತಿ ಕಾಯುವಂತಾಗಿದೆ ಎಂದು ಹೇಳಬಹುದು.

ಯಾವುದೇ ಧರ್ಮವಿರಲಿ ಅದು ಸಹಬಾಳ್ವೆ, ವೈಚಾರಿಕತೆಯ ತಳಹದಿ ಹೊಂದಿರುತ್ತದೆ. ಮೊದಲು ಜಾತಿ, ಧರ್ಮ, ಸ್ವಾರ್ಥತೆ ಇಲ್ಲದ ಸಮಾಜ ನಿರ್ಮಾಣವಾಗಬೇಕು.

ಹೊಸ ಸಮಾಜ ಹುಟ್ಟು ಹಾಕುವ ಹೊಸ ಸಾಹಿತಿ, ಹೊಸ ಸಾಹಿತ್ಯ ಲೇಖಕರನ್ನು ಸೃಷ್ಟಿಸುವ ರೀತಿಯಲ್ಲಿ ಈ ಕರ್ನಾಟಕ ಜನಸಾಹಿತ್ಯ ಸಮಾವೇಶ ಮೂಡಿಬರಬೇಕು.

ಖಾಸಗೀಕರಣ, ಉದಾರೀಕರಣ ಇಂದು ಸೃಜನಶೀಲ ಸಂವೇದನೆ, ಬದುಕನ್ನು ಪಲ್ಲಟಗೊಳಿಸಿ ತಾಯಿತನವನ್ನು ಸಹ ಇಂದು ಬಿಕರಿ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ತಲ್ಲಣ, ಸಂಕಷ್ಟಗಳನ್ನು ಸಾಹಿತಿಗಳು ಕೇವಲ ಬಾಯಿ ಮಾತಾಗಿಸಿಕೊಂಡಿದ್ದಾರೆ.

ಹೀಗಾಗಿ ಸಾಹಿತಿಗಳು, ಕಲಾವಿದರು ಉಸಿರುಗಟ್ಟುವ ವಾತಾವರಣದಲ್ಲಿ ಬದುಕುವಂತಾಗಿದೆ. ಭ್ರಷ್ಟಾಚಾರ, ಕೋಮುವಾದಗಳು ವರ್ತಮಾನದಲ್ಲಿ ಸಾಕಷ್ಟು ಗೊಂದಲಗಳನ್ನು ಹುಟ್ಟುಹಾಕಿವೆ. ಇದರಿಂದ ಸಮಾಜದಲ್ಲಿ ಶ್ರೇಣೀಕೃತ ವಾತಾವರಣ ಸೃಷ್ಟಿಯಾಗುತ್ತಿದೆ. ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆ, ಜನಹಿತ ಕಾಪಾಡುವ ರೀತಿಯಲ್ಲಿ ಸಾಹಿತ್ಯ ಮುಂದುವರಿಯಬೇಕಾಗಿದೆ.

ಹೊಸ ತಲೆಮಾರಿನ ನವ ಸಾಹಿತ್ಯದ ಹುಟ್ಟಿಗೆ ಈ ನಿಟ್ಟಿನಲ್ಲಿ ಬರಹಗಾರರ

ಆಶಯಗಳು ಬದಲಾವಣೆಯಾಗಬೇಕಿದೆ.

ಬದುಕಿನ ಹಲವು ಅನುಭವಗಳು, ಸಾಹಿತ್ಯದ ವಿಸ್ತಾರವಾದ ಓದು ಹಾಗೂ ಅನುಸಂಧಾನದಿಂದ ಪಕ್ವಗೊಂಡ ಮನಸ್ಸಿನ ಬರಹಗಾರರು, ಸದಾ ಹಸನ್ಮುಖಿ ಕ್ರಿಯಾಶೀಲ ಬರಹಗಾರರು, ಅವರ ಸಾಹಿತ್ಯ ವೈವಿಧ್ಯಮಯವಾದುದನ್ನು ವಿಮರ್ಶೆ, ಕಾವ್ಯ, ಸಂಪಾದನೆ, ಅಧ್ಯಾಪನ ಮುಂತಾದ ವಲಯಗಳಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಬೇಕು.

ಯಾವ ಹಮ್ಮು-ಬಿಮ್ಮುಗಳಿಲ್ಲದ ಸರಳ ಸಜ್ಜನಿಕೆಯ, ಸೂಕ್ಷ್ಮ ಸಂವೇದನೆಯ ಸಾಹಿತ್ಯ ಬರಹಗಳಲ್ಲಿ ನಯವಾದ, ಮೃದುವಾದ ಪದಗಳನ್ನು ಲೀಲಾಜಾಲವಾಗಿ ಬಳಸಿಕೊಳ್ಳುತ್ತಾರೆ. ಅವರ ಸೃಷ್ಟಿ ಪ್ರಗತಿಪರವಾದುದು. ವರ್ತಮಾನದ ಸಾಮಾಜಿಕ ತಲ್ಲಣಗಳಿಗೆ, ಸಮಸ್ಯೆಗಳಿಗೆ, ಜಾಗತೀಕರಣದ ಹಲವು ಆಯಾಮಗಳಿಗೆ ಯುವ ಬರಹಗಾರರ ಬರಹಗಳು ಮುಖಾಮುಖಿಯಾಗುತ್ತವೆ, ಸ್ಪಂದಿಸುತ್ತಿವೆ, ಅನುಸಂಧಾನವಾಗುತ್ತವೆ.

ಸಮಾನತೆಯ, ಮಾನವೀಯ ಸಂವೇದನೆಯ ಆಶಯಗಳನ್ನು ಬರಹಗಾರರು ಸಮಕಾಲೀನ ಸಂದರ್ಭಗಳಿಗೆ ತಕ್ಷಣ ಪ್ರತಿಕ್ರಿಯಿಸುವ ಸೂಕ್ಷ್ಮತೆ ಅವರಲ್ಲಿ ಕಂಡುಬರುತ್ತದೆ. ಎಲ್ಲರೂ ಕೂಡಿ ಬಾಳುವ ಮಾನವೀಯ ಅಂತಃಕರಣ, ಸಂಸ್ಕೃತಿಯನ್ನು ಕಟ್ಟುವ ಆಶಯ, ಜೀವಪರ ಕಾಳಜಿ ಮುಂತಾದ ಪ್ರಮುಖ ಅಂಶಗಳನ್ನು ಇಟ್ಟುಕೊಂಡು ವಿಮರ್ಶಾ ಬರಹಗಳಲ್ಲಿ, ಸಾಹಿತ್ಯ ಕೃಷಿಯಲ್ಲಿ ವಿಶಿಷ್ಟವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಕೃತಿಗಳಲ್ಲಿ ಸಾಮಾಜಿಕ ಚಿಂತನೆ ಹಾಗೂ ವೈಯಕ್ತಿಕ ಜೀವನ ಬೇರೆ ಬೇರೆಯಾಗಿ ನೋಡುವುದಿಲ್ಲ.

ಮನುಷ್ಯನ ಸಾಮಾಜಿಕ ಜೀವನದ ಸಾಂಸ್ಕೃತಿಕ ಬದುಕು, ಮೌಲ್ಯಗಳು ಮತ್ತು ಅವುಗಳಲ್ಲಿನ ಸ್ಥಿತ್ಯಂತರಗಳು, ಹಲವು ಸಮಸ್ಯೆಗಳು, ತಲ್ಲಣಗಳು, ಅಸಮಾನತೆಗಳು ಮುಂತಾದವುಗಳ ಸೂಕ್ಷ್ಮವಾದ ಗ್ರಹಿಸುವಿಕೆ, ಅವುಗಳನ್ನು ಹೋಗಲಾಡಿಸಲು ಬಯಸುವುದನ್ನು ಕಾಣಬಹುದು. ವೈಚಾರಿಕ, ತಳಸ್ಪರ್ಶಿ ಚಿಂತನೆ, ಅನ್ಯಾಯದ ಬಗ್ಗೆ ಆಕ್ರೋಶ, ಇಲ್ಲಿ ಮಾನವೀಯ ಭಾವಸ್ಪಂದನ ಕಾಣಬಹುದಾಗಿದೆ.

ವಿಮರ್ಶೆಯ ಬರಹಗಳನ್ನು ಕ್ರಿಯಾಶೀಲಗೊಳಿಸಲು ಗಟ್ಟಿ ಬರಹಗಾರರು, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ, ವಿಶೇಷವಾಗಿ ವಿಮರ್ಶಾ ಕ್ಷೇತ್ರದಲ್ಲಿ ಬರಹಗಾರರು ತಮ್ಮನ್ನು ಹೊಸ ತಲ್ಲಣಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಬರಗೂರು ರಾಮಚಂದ್ರಪ್ಪ, (2001), ಬಂಡಾಯ ಸಾಹಿತ್ಯ ಮೀಮಾಂಸೆ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
2. ನಾಗರಾಜ್ ಡಿ.ಆರ್., (1999), ಸಾಹಿತ್ಯ ಕಥನ, ಹೆಗ್ಗೋಡು: ಅಕ್ಷರ ಪ್ರಕಾಶನ.
3. ರಹಮತ್ ತರೀಕೆರೆ, (2008), ಮತ್ತೆ ಮತ್ತೆ ಬಂಡಾಯ, ಬೆಂಗಳೂರು: ಅಭಿನವ ಪ್ರಕಾಶನ.
4. ಶಿವಾನಂದ ಕುರುಬತ್ತಿ, (2012), ಜಾಗತೀಕರಣ ಮತ್ತು ಕನ್ನಡ ಸಾಹಿತ್ಯ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
5. ರಾಘವೇಂದ್ರ ರಾವ್ ಎಚ್.ಎಸ್., (2005), ವಿಸ್ತಾರ: ಸಮಕಾಲೀನ ಸಾಹಿತ್ಯ ವಿಮರ್ಶೆ, ಬೆಂಗಳೂರು: ಅಂಕಿತ ಪುಸ್ತಕ.